# 2001ರ ಕರ್ನಾಟಕ ಅಧಿನಿಯಮ ಸಂಖ್ಯೆ: 19

# ರೋರಿಕ್ ಮತ್ತು ದೇವಿಕಾರಾಣಿ ರೋರಿಕ್ ಎಸ್ಟೇಟ್ (ಆರ್ಜನೆ ಮತ್ತು ವರ್ಗಾವಣೆ) (ತಿದ್ದುಪಡಿ) ಅಧಿನಿಯಮ, 2001

## ಪ್ರಕರಣಗಳ ಪಟ್ಟಿ

**ಪ್ರಕರಣಗಳು:**

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ

2. 19ಎ ಹೊಸ ಪ್ರಕರಣದ ಸೇರ್ಪಡೆ

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

### (ವಿಧೇಯಕವನ್ನು ಮಂಡಿಸುವಾಗ ಲಗತ್ತಿಸಿದಂತೆ)

ರೋರಿಕ್ ಮತ್ತು ದೇವಿಕಾರಾಣಿ ರೋರಿಕ್ ಎಸ್ಟೇಟ್ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996ರ ಸಂವಿಧಾನಾತ್ಮಕ ಮಾನ್ಯತೆಯನ್ನು 1996ರ ರಿಟ್ ಅರ್ಜಿ ಸಂಖ್ಯೆ 32560 ರಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯದ ಮುಂದೆ ಪ್ರಶ್ನಿಸಲಾಗಿದೆ. ಮಾಲೀಕರು, ವರ್ಗಾವಣೆ ಪಡೆದವರು ಮತ್ತು ಎಸ್ಟೇಟಿನಲ್ಲಿ ಹಿತಾಸಕ್ತಿಯುಳ್ಳ ವ್ಯಕ್ತಿಗಳಿಗೆ ಹಣ ಸಂದಾಯ ಮಾಡುವುದಕ್ಕೆ ಸಂಬಂಧಿಸಿದಂತೆ ಅಧಿನಿಯಮದಲ್ಲಿ ಸಮರ್ಪಕ ಮತ್ತು ಪರಿಣಾಮಕಾರಿಯಾದ ವ್ಯವಸ್ಥೆಯನ್ನು ಕಲ್ಪಿಸುವುದಕ್ಕಾಗಿ ಸದರಿ ಅಧಿನಿಯಮವನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಭಾವಿಸಲಾಗಿದೆ.

(i) 7 ಮತ್ತು 8ನೇ ಪ್ರಕರಣಗಳಲ್ಲಿ ಉಲ್ಲೇಖಿಸಲಾದ ಮೊಬಲಗನ್ನು ಪೂರ್ಣವಾಗಿ ಅಥವಾ ಭಾಗಶಃ ಪಡೆಯುವಲ್ಲಿ ಎಸ್ಟೇಟಿನ ಮಾಲೀಕರು, ವರ್ಗಾವಣೆ ಪಡೆದವರು ಅಥವಾ ಹಿತಾಸಕ್ತಿಯುಳ್ಳ ವ್ಯಕ್ತಿಗಳು ಹೊಂದಿರುವ ಹಕ್ಕಿಗೆ ಸಂಬಂಧಿಸಿದಂತೆ, ಸಂದೇಹ ಅಥವಾ ವಿವಾದ ಉಂಟಾದ ಸಂದರ್ಭದಲ್ಲಿ, ಈ ವಿಷಯವನ್ನು ಸಿವಿಲ್ ನ್ಯಾಯಾಲಯಕ್ಕೆ ಉಲ್ಲೇಖಿಸಲು ಹಣಸಂದಾಯದ ಕಮೀಷನರಿಗೆ ಅಧಿಕಾರವನ್ನು ನೀಡುವುದು; ಮತ್ತು

(ii) ನ್ಯಾಯಾಲಯದ ತೀರ್ಪಿಗನುಸಾರವಾಗಿ ಮೊಬಲಗನ್ನು ಹಂಚಿಕೆ ಮಾಡುವುದು.

ಆದ್ದರಿಂದ ಈ ವಿಧೇಯಕ.

(2001ರ ವಿಧಾನ ಪರಿಷತ್ತಿನ ವಿಧೇಯಕ ಸಂಖ್ಯೆ:1 ಕಡತ ಸಂಖ್ಯೆ: ಸಂವ್ಯಶಾಇ 35 ಶಾಸನ 2001)

## 2001 ರ ಕರ್ನಾಟಕ ಅಧಿನಿಯಮ ಸಂಖ್ಯೆ 19

*(2001 ರ ಆಗಸ್ಟ್ ಹತ್ತನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)*

## ರೋರಿಕ್ ಮತ್ತು ದೇವಿಕಾರಾಣಿ ರೋರಿಕ್ ಎಸ್ಟೇಟ್ (ಆರ್ಜನೆ ಮತ್ತು ವರ್ಗಾವಣೆ) (ತಿದ್ದುಪಡಿ) ಅಧಿನಿಯಮ, 2001

*(2001 ರ ಆಗಸ್ಟ್ ಹತ್ತನೇ ದಿನಾಂಕದಂದು ಕರ್ನಾಟಕ ರಾಜ್ಯಪಾಲರ ಅನುಮತಿಯನ್ನು ಪಡೆಯಲಾಗಿದೆ)*

ರೋರಿಕ್ ಮತ್ತು ದೇವಿಕಾರಾಣಿ ರೋರಿಕ್ ಎಸ್ಟೇಟ್ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996ನ್ನು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇದರಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ರೋರಿಕ್ ಮತ್ತು ದೇವಿಕಾರಾಣಿ ರೋರಿಕ್ ಎಸ್ಟೇಟ್ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996ನ್ನು (1996ರ ಕರ್ನಾಟಕ ಅಧಿನಿಯಮ 19) ತಿದ್ದುಪಡಿಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಐವತ್ತೆರಡನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ರೋರಿಕ್ ಮತ್ತು ದೇವಿಕಾರಾಣಿ ರೋರಿಕ್ ಎಸ್ಟೇಟ್ (ಆರ್ಜನೆ ಮತ್ತು ವರ್ಗಾವಣೆ) (ತಿದ್ದುಪಡಿ) ಅಧಿನಿಯಮ, 2001 ಎಂದು ಕರೆಯತಕ್ಕದ್ದು.

(2) ಇದು 1996ರ ನವೆಂಬರ್ ಇಪ್ಪತ್ತೊಂದನೇ ದಿನಾಂಕದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

**2. 19ಎ ಹೊಸ ಪ್ರಕರಣದ ಸೇರ್ಪಡೆ.-** ರೋರಿಕ್ ಮತ್ತು ದೇವಿಕಾರಾಣಿ ರೋರಿಕ್ ಎಸ್ಟೇಟ್ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996ರ (1996ರ ಕರ್ನಾಟಕ ಅಧಿನಿಯಮ 19) 19ನೇ ಪ್ರಕರಣದ ತರುವಾಯ ಈ ಮುಂದಿನ ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ,-

**19ಎ. ಮಾಲೀಕರಿಗೆ, ವರ್ಗಾವಣೆ ಪಡೆದವರಿಗೆ ಮತ್ತು ಹಿತಾಸಕ್ತಿಯುಳ್ಳ ಇತರೆ ವ್ಯಕ್ತಿಗಳಿಗೆ ಮೊಬಲಗಿನ ಹಂಚಿಕೆ.-** (1) ಎಸ್ಟೇಟಿನ ಸಂಬಂಧದಲ್ಲಿ ಕಮೀಷನರನಿಗೆ

---

ಕರ್ನಾಟಕ ರಾಜ್ಯ ಪತ್ರದ ಭಾಗ-IVಎ ವಿಶೇಷ ಪತ್ರಿಕೆ ಸಂಖ್ಯೆ:1524 ದಿನಾಂಕ 10.8.2001 ರಲ್ಲಿ ಪ್ರಕಟಿತ ಕಡತ ಸಂಖ್ಯೆ: ಸಂವ್ಯಶಾಇ 35 ಶಾಸನ 2001

ಸಂದಾಯಮಾಡಿದ ಹಣದ ಪೈಕಿ, ಅನುಸೂಚಿ-IIರಲ್ಲಿ ನಿರ್ದಿಷ್ಟಪಡಿಸಿದ ಹೊಣೆಗಾರಿಕೆಗಳನ್ನು ಪೂರೈಸಿದ ತರುವಾಯ ಯಾವುದೇ ಹಣ ಉಳಿದರೆ, ಅವನು ಹಾಗೆ ಉಳಿದ ಹಣವನ್ನು ಮಾಲೀಕರಿಗೆ, ವರ್ಗಾವಣೆ ಪಡೆದವರಿಗೆ ಮತ್ತು ಹಿತಾಸಕ್ತಿಯುಳ್ಳ ಇತರ ವ್ಯಕ್ತಿಗಳಿಗೆ ಹಂಚಿಕೆ ಮಾಡತಕ್ಕದ್ದು.

(2) ಎಸ್ಟೇಟಿನಲ್ಲಿ ಮಾಲೀಕರಿಗೆ, ವರ್ಗಾವಣೆ ಪಡೆದವರಿಗೆ ಮತ್ತು ಹಿತಾಸಕ್ತಿಯುಳ್ಳ ಇತರ ವ್ಯಕ್ತಿಗಳಿಗೆ, ಎಸ್ಟೇಟಿನಲ್ಲಿರುವ ಅವರ ಹಿತಾಸಕ್ತಿಯ ಅನುಪಾತಕ್ಕೆ ಅನುಸಾರವಾಗಿ ಯಾವುದೇ ಸಂದಾಯ ಮಾಡುವ ಮೊದಲು, ಕಮೀಷನರನು ಅಂಥ ಮೊಬಲಗನ್ನು ಪೂರ್ಣವಾಗಿ ಅಥವಾ ಭಾಗಶಃ ಸ್ವೀಕರಿಸಲು ಅಂಥ ಮಾಲೀಕರು, ವರ್ಗಾವಣೆ ಪಡೆದವರು ಮತ್ತು ಹಿತಾಸಕ್ತಿಯುಳ್ಳ ಇತರ ವ್ಯಕ್ತಿಗಳು ಹೊಂದಿರುವ ಹಕ್ಕಿನ ಸಂಬಂಧದಲ್ಲಿ ಅವನು ಮನದಟ್ಟು ಮಾಡಿಕೊಳ್ಳತಕ್ಕದ್ದು ಮತ್ತು ಅವರ ನಡುವೆ ಮೊಬಲಗಿನ ಹಂಚಿಕೆ ಮಾಡುವುದು ಸೇರಿದಂತೆ 7 ಮತ್ತು 8ನೇ ಪ್ರಕರಣಗಳಲ್ಲಿ ಉಲ್ಲೇಖಿಸಲಾದ ಮೊಬಲಗನ್ನು ಪೂರ್ಣವಾಗಿ ಅಥವಾ ಭಾಗಶಃ ಸ್ವೀಕರಿಸಲು ಹಕ್ಕುಳ್ಳ ಅಂಥ ಮಾಲೀಕ, ವರ್ಗಾವಣೆ ಪಡೆದವ ಅಥವಾ ಹಿತಾಸಕ್ತಿಯುಳ್ಳ ಇತರ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಸಂದೇಹ ಅಥವಾ ವಿವಾದ ಉಂಟಾಗಿದ್ದ ಸಂದರ್ಭದಲ್ಲಿ, ಕಮೀಷನರನು ಆ ವಿಷಯವನ್ನು ನ್ಯಾಯಾಲಯಕ್ಕೆ ಉಲ್ಲೇಖಿಸತಕ್ಕದ್ದು ಮತ್ತು ನ್ಯಾಯಾಲಯದ ತೀರ್ಮಾನಕ್ಕನುಸಾರ ಹಂಚಿಕೆ ಮಾಡತಕ್ಕದ್ದು.

(3) ಸ್ವತ್ತು ಎಸ್ಟೇಟಿನ ಭಾಗವಾಗಿರುವ ಬಗ್ಗೆ ಗೊತ್ತುಪಡಿಸಿದ ದಿನಾಂಕದಂದು ಇದ್ದ ಸ್ವತ್ತಿನ ಮೌಲ್ಯವನ್ನು ಸೂಕ್ತವಾಗಿ ಗಮನಿಸಿ, ಎಸ್ಟೇಟಿನ ಸಂಬಂಧದಲ್ಲಿ ಮಾಲೀಕರು, ವರ್ಗಾವಣೆ ಪಡೆದವರು ಮತ್ತು ಹಿತಾಸಕ್ತಿಯುಳ್ಳ ಇತರ ವ್ಯಕ್ತಿಗಳ ನಡುವೆ ಮೊಬಲಗಿನ ಹಂಚಿಕೆಯನ್ನು ನ್ಯಾಯಾಲಯವು ನಿರ್ಧರಿಸತಕ್ಕದ್ದು.

(4) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಎಸ್ಟೇಟಿಗೆ ಸಂಬಂಧಿಸಿದಂತೆ ಮಾಲೀಕರು, ವರ್ಗಾವಣೆ ಪಡೆದವರು ಅಥವಾ ಹಿತಾಸಕ್ತಿಯುಳ್ಳ ಇತರ ವ್ಯಕ್ತಿಗಳು ಹೊಂದಿರುವ ಹಕ್ಕು, ಸ್ವಾಮ್ಯ ಮತ್ತು ಹಿತಾಸಕ್ತಿಯ ಬಗ್ಗೆ ನ್ಯಾಯಾಲಯದ ಮುಂದೆ ರುಜುವಾತುಪಡಿಸಲು ಸಾಕ್ಷ್ಯ ನೀಡುವುದಕ್ಕೆ ಅನುಮತಿ ಇರತಕ್ಕದ್ದು.

ವಿವರಣೆ.- ಈ ಪ್ರಕರಣದಲ್ಲಿ, ಎಸ್ಟೇಟಿಗೆ ಸಂಬಂಧಿಸಿದಂತೆ ನ್ಯಾಯಾಲಯ ಎಂದರೆ ಯಾವ ಪ್ರಧಾನ ನ್ಯಾಯಾಲಯದ ಮೂಲ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳೊಳಗೆ ಎಸ್ಟೇಟು ಇದೆಯೋ ಆ ಪ್ರಧಾನ ನ್ಯಾಯಾಲಯ.